ವಿಷಯ : ದೇಶ ಭಕ್ತಿಗೀತೆಗಳು

## ಜಯ್ ಭಾರತ ಜನನಿಯ ತನುಜಾತೆ

ಜಯ್ ಭಾರತ ಜನನಿಯ ತನುಜಾತೆ
ಜಯ್ ಭಾರತ ಜನನಿಯ ತನುಜಾತೆ,
ಜಯಹೇ ಕರ್ನಾಟಕ ಮಾತೆ!

ಜಯ್ ಸುಂದರ ನದಿ ವನಗಳ ನಾಡೆ,
ಜಯ ಹೇ ರಸಋಷಿಗಳ ಬೀಡೆ!
ಭೂದೇವಿಯ ಮಕುಟದ ನವಮಣಿಯೆ,
ಗಂಧದ ಚಂದದ ಹೊನ್ನಿನ ಗಣಿಯೆ;
ರಾಘವ ಮಧುಸೂದನರವತರಿಸಿದ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ!

ಜನನಿಯ ಜೋಗುಳ ವೇದದ ಘೋಷ,
ಜನನಿಗೆ ಜೀವವು ನಿನ್ನಾವೇಶ.
ಹಸುರಿನ ಗಿರಿಗಳ ಸಾಲೆ
ನಿನ್ನಯ ಕೊರಳಿನ ಮಾಲೆ,
ಕಪಿಲ ಪತಂಜಲ ಗೌತಮ ಜಿನನುತ
ಭಾರತ ಜನನಿಯ ತನುಜಾತೆ
ಜಯ ಹೇ ಕರ್ನಾಟಕ ಮಾತೆ!

ಶಂಕರ ರಾಮಾನುಜ ವಿದ್ಯಾರಣ್ಯ
ಬಸವೇಶ್ವರರಿಹ ದಿವ್ಯಾರಣ್ಯ
ರನ್ನ ಷಡಕ್ಷರಿ ಪೊನ್ನ
ಪಂಪ ಲಕುಮಿಪತಿ ಜನ್ನ
ಕಬ್ಬಿಗರುದಿಸಿದ ಮಂಗಳಧಾಮ,
ಕವಿಕೋಗಿಲೆಗಳ ಪುಣ್ಯಾರಾಮ!
ನಾನಕ ರಾಮಾನಂದ ಕಬೀರರ
ಭಾರತ ಜನನಿಯ ತನುಜಾತೆ,
ಜಯಹೇ ಕರ್ನಾಟಕ ಮಾತೆ!

KannadaPdf.com

ತೈಲಪ ಹೊಯ್ಸಳರಾಳಿದ ನಾಡೆ,
ಡಂಕಣ ಜಕಣರ ನೆಚ್ಚಿನ ಬೀಡೆ,
ಕೃಷ್ಣ ಶರಾವತಿ ತುಂಗಾ
ಕಾವೇರಿಯ ವರ ರಂಗ!
ಚೈತನ್ಯ ಪರಮಹಂಸ ವಿವೇಕರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ!

ಸರ್ವ ಜನಾಂಗದ ಶಾಂತಿಯ ತೋಟ,
ರಸಿಕರ ಕಂಗಳ ಸೆಳೆಯುವ ನೋಟ.
ಹಿಂದೂ ಕ್ರೈಸ್ತ ಮುಸಲ್ಮಾನ
ಪಾರಸಿಕ ಜೈನರುದ್ಯಾನ.
ಜನಕನ ಹೋಲುವ ದೊರೆಗಳ ಧಾಮ,
ಗಾಯಕ ವೈಣಿಕರಾರಾಮ
ಕನ್ನಡಿ ನುಡಿ ಕುಣಿದಾಡುವ ಗೇಹ,
ಕನ್ನಡ ತಾಯಿಯ ಮಕ್ಕಳ ದೇಹ!
ಜಯ್ ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ!

ಜಯ್ ಸುಂದರ ನದಿ ವನಗಳ ನಾಡೆ,
ಜಯ ಹೇ ರಸಋಷಿಗಳ ಬೀಡೆ.

**ಹಾಡು:** ಜಯ ಭಾರತ ಜನನಿಯ ತನುಜಾತೆ
**ರಚನೆ:** ಕುವೆಂಪು

## ಜನ ಗಣ ಮನ

ಜನ ಗಣ ಮನ ಅಧಿನಾಯಕ ಜಯ ಹೇ
ಭಾರತ ಭಾಗ್ಯವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉತ್ಕಲ ಜಲಧಿ ತರಂಗ
ತವ ಶುಭ ನಾಮೇ ಜಾಗೇ
ಗಾಹೇ ತವ ಜಯ ಗಾಥಾ
ಜನ ಗಣ ಮಂಗಲ ದಾಯಕ ಜಯ ಹೇ
ಭಾರತ ಭಾಗ್ಯ ವಿಧಾತಾ
ಜಯ ಹೇ ಜಯ ಹೇ ಜಯ ಹೇ
ಜಯ ಜಯ ಜಯ ಜಯ ಹೇ

KannadaPdf.com

ಹಾಡು : ಜನ ಗಣ ಮನ
ಗಾಯಕ: ರವೀಂದ್ರನಾಥ ಟ್ಯಾಗೋರ್
ಸಂಗೀತ ಸಂಯೋಜಕ: ರವೀಂದ್ರನಾಥ ಟ್ಯಾಗೋರ್
ಜನವರಿ **24, 1950** ರಂದು ರಾಷ್ಟ್ರಗೀತೆ ಎಂದು ಘೋಷಿಸಲಾಯಿತು

## ವಂದೇ ಮಾತರಂ

ಸುಜಲಾಂ ಸುಫಲಾಂ
ಮಲಯಜ ಶೀತಲಾಂ
ಸಸ್ಯ ಶ್ಯಾಮಲಾಂ ಮಾತರಂ | ವಂದೇ ಮಾತರಂ||

ಶುಭ್ರ ಜ್ಯೋತ್ಸ್ನಾ ಪುಲಕಿತ ಯಾಮಿನೀಂ
ಫುಲ್ಲ ಕುಸುಮಿತ ದ್ರುಮದಲ ಶೋಭಿನೀಂ
ಸುಹಾಸಿನೀಂ ಸುಮಧುರ ಭಾಷಿಣೀಂ
ಸುಖದಾಂ ವರದಾಂ ಮಾತರಂ | ವಂದೇ ಮಾತರಂ ||

ಕೋಟಿ ಕೋಟಿ ಕಂಠ ಕಲಕಲ ನಿನಾದ ಕರಾಲೇ
ಕೋಟಿ ಕೋಟಿ ಭುಜೈರ್ಧೃತ ಖರ ಕರವಾಲೇ
ಅಬಲಾ ಕೆನೊ ಮಾ ಎತೋ ಬಲೆ
ಬಹುಬಲಧಾರಿಣೀಂ ನಮಾಮಿ ತಾರಿಣೀಂ
ರಿಪುದಲ ವಾರಿಣೀಂ ಮಾತರಂ | ವಂದೇ ಮಾತರಂ ||

ತುಮಿ ವಿದ್ಯಾ ತುಮಿ ಧರ್ಮ
ತುಮಿ ಹೃದಿ ತುಮಿ ಮರ್ಮ
ತ್ವಂಹಿ ಪ್ರಾಣಾಃ ಶರೀರೇ
ಬಾಹುತೇ ತುಮಿ ಮಾ ಶಕ್ತಿ
ಹೃದಯೇ ತುಮಿ ಮಾ ಭಕ್ತಿ
ತೋಮಾರಯಿ ಪ್ರತಿಮಾ ಗಡಿ
ಮಂದಿರೇ ಮಂದಿರೇ | ವಂದೇ ಮಾತರಂ ||

ತ್ವಂ ಹಿ ದುರ್ಗಾ ದಶಪ್ರಹರಣ ಧಾರಿಣೀ
ಕಮಲಾ ಕಮಲದಲವಿಹಾರಿಣೀ
ವಾಣೀ ವಿದ್ಯಾದಾಯಿನೀ
ನಮಾಮಿತ್ವಾಂ ನಮಾಮಿ ಕಮಲಾಂ
ಅಮಲಾಂ ಅತುಲಾಂ
ಸುಜಲಾಂ ಸುಫಲಾಂ ಮಾತರಂ | ವಂದೇ ಮಾತರಂ ||

KannadaPdf.com

ಶ್ಯಾಮಲಾಂ ಸರಲಾಂ ಸುಸ್ಮಿತಾಂ ಭೂಷಿತಾಂ
ಧರಣೀಂ ಭರಣೀಂ ಮಾತರಂ | ವಂದೇ ಮಾತರಂ ||

ಹಾಡು: ವಂದೇ ಮಾತರಂ
ಸಾಹಿತ್ಯ: ಬಂಕಿಮ್ ಚಂದ್ರ ಚಟರ್ಜಿ.

## ಝುಂಡಾ ಉಂಚಾ ರಹೇ ಹಮಾರಾ

ವಿಜಯೀ ವಿಶ್ವತಿರಂಗಾ ಪ್ಯಾರಾ ಝುಂಡಾ
ಊಂಛಾ ರಹೇ ಹಮಾರಾ ॥ಝುಂಡಾ॥

ಸದಾ ಶಕ್ತಿ ಬರ್ಸಾನೇ ವಾಲಾ
ಪ್ರೇಮ ಸುಧಾ ಸರ್ಸಾನೇ ವಾಲಾ ವೀರೋಂಕೋ ಹರ್ಷಾನೇ
ವಾಲಾ ಮಾತೃಭೂಮಿಕಾ
ತನ್ ಮನ್ ಸಾರಾ ॥ಝುಂಡಾ॥

ಸ್ವತಂತ್ರತಾಕೀ ಭೀಷಣ ರಣ್ ಮೇ
ಲಗ್ಕರ್ ಬಡೇ ಜೋಷ್ ಕ್ಷಣ್ ಕ್ಷಣ್ಮೇ ಕಾವೇ ಶತ್ರು ದೇಖ್ಕರ್
ಮನ್ಮೇ ಮಿಟ್ ಜಾವೇ
ಭಯ್ ಸಂಕಟ್ ಸಾರಾ ॥ಝುಂಡಾ॥

ಇನ್ ಝುಂಡೇಕೇ ನೀಚೇ ನಿರ್ಭಯ್
ಲೇ ಸ್ವರಾಜ್ಯ ಯಹ ಅವಿಚಲ ನಿಶ್ಚಯ್
ಬೋಲೋ, ಭಾರತ್ ಮಾತಾಕೀ ಜಯ್
ಸ್ವತಂತ್ರತಾ ಹಿ ಧ್ಯೇಯ್ ಹಮಾರಾ ॥ಝುಂಡಾ॥

ಇಸ್ ಕೀ ಶಾನ್ ನೀ ಜಾನೇ ಪಾವೇ
ಚಾಹೆ ಜಾನ್ ಭಲೇಹಿ ಜಾಯೇ
ವಿಶ್ವ ವಿಜಯ ಕರ್ ಕೇ ದಿಖ್ ಲಾವೇ
ತಬ್ ಹೂವೇ ಪ್ರಾಣ ಪೂರ್ಣ ಹಮಾರಾ ॥ಝುಂಡಾ॥

ಹಾಡು: ಝುಂಡಾ ಉಂಚಾ ರಹೇ ಹಮಾರಾ
ಬರೆದವರು: ಶಾಮ್ ಪ್ರಸಾದ್

## ಸಾರೆ ಜಹಾನ್ ಸೆ ಅಚ್ಚಾ

ಸಾರೇ ಜಹಾನ್ ಸೆ ಅಚ್ಛಾ



KannadaPdf.com

ಹಿಂದುಸ್ತಾನ್ ಹಮಾರಾ
ಹಂ ಬುಲ್ ಬುಲೇ ಹೈ ಇಸ್ಕೀ
ಯೇ ಗುಲ್ ಸಿತಾ ಹಮಾರಾ
ಸಾರೇ ಜಹಾನ್ ಸೆ ಅಚ್ಛಾ

ಪರಬತ್ ವೋ ಸಬ್ ಸೇ ಊಂಛಾ
ಹಂಸಾಯಾ ಆಸ್ಮಾನ್ ಕಾ
ವೋ ಸಂತರೀ ಹಮಾರಾ
ವೋ ಪಾಸ್ಬಾ ಹಮಾರಾ

ಗೋದಿಮೇ
ಖೇಲ್ ತೀ ಹೈ ಇಸ್ಕೀ ಹಜಾರೋ ನದಿಯಾ ಗುಲ್ ಷನ್ ಹೈ
ಜಿನ್ ಕೇ
ದಂ ಸೇ ರಶ್ ಕೇ ಜನಾ ಹಮಾರಾ

ಮಜ್ ಹಬ್ ನಹೀ ಸಿಖಾತಾ
ಆಪಸ್ ಮೆ ಬೈರ್ ರಖ್ನಾ
ಹಿಂದ್ ವಿ ಹೈ ಹಂ ವತನ್ ಹೈ
ಹಿಂದುಸ್ತಾನ್ ಹಮಾರಾ

ಹಾಡು: ಸಾರೆ ಜಹಾನ್ ಸೆ ಅಚ್ಛಾ
ಗಾಯಕಿ: ಲತಾ ಮಂಗೇಶ್ಕರ್
ಕವಿ ಬರೆದವರು: ಮುಹಮ್ಮದ್ ಇಕ್ಬಾಲ್

## ಭರತ ಭೂಮಿ ನನ್ನ ತಾಯಿ

ಭರತ ಭೂಮಿ ನನ್ನ ತಾಯಿ
ನನ್ನ ಪೊರೆವ ತೊಟ್ಟಿಲು
ಜೀವನವನೆ ದೇವಿಗೆರೆವೆ
ಬಿಡುತೆ ಗುಡಿಯ ಕಟ್ಟಲು || ಪ ||

ತುಹಿನ ಗಿರಿಯ ಸಿರಿಯ ಮುಡಿಯ
ಹಿರಿಯ ಕಡಲು ತೊಳೆಯುವಡಿಯ
ಪೈರು ಪಚ್ಚೆ ಪಸುರಿನುಡೆಯ || ಅ || ಪ ||

ಸಿಂಧು ಯಮುನೆ ದೇವ ಗಂಗೆ
ತಪತಿ ಕೃಷ್ಣೆ ಭದ್ರೆ ತುಂಗೆ
ಸಲಿಲ ತೀರ್ಥ ಪುಣ್ಯ ರಂಗೆ || 1 ||

KannadaPdf.com

ಮತದ ಬಿರುಕುಗಳನು ತೊರೆವೆ
ನುಡಿಗಳೊಡಕುಗಳನು ಮರೆವೆ
ತೊತ್ತ ತೊಡಕುಗಳನು ಬಿರಿವೆ
ಸ್ವಾತಂತ್ರ್ಯದ ಸ್ವರ್ಗಕೇರೆ
ಪುಣ್ಯದೇಣಿ ಮೆಟ್ಟಿಲು || 2 ||

ಹಾಡು: ಭರತ ಭೂಮಿ ನನ್ನ ತಾಯಿ
ಕವಿ ಬರೆದವರು: ರಾಷ್ಟ್ರಕವಿ ಕುವೆಂಪು

## ಏರುತಿಹುದು ಹಾರುತಿಹುದು

ಏರುತಿಹುದು ಹಾರುತಿಹುದು
ನೋಡು ನಮ್ಮ ಬಾವುಟ
ತೋರುತಿಹುದು ಹೊಡೆದು ಹೊಡೆದು
ಬಾನಿನಗಲ ಪಟಪಟ

ಕೇಸರಿ ಬಿಳಿ ಹಸಿರು ಮೂರು
ಬಣ್ಣ ನಡುವೆ ಚಕ್ರವು
ಸತ್ಯ ಶಾಂತಿ ತ್ಯಾಗ ಮೂರ್ತಿ
ಗಾಂಧಿ ಹಿಡಿದ ಚರಕವು

ಇಂತ ಧ್ವಜವು ನಮ್ಮ ಧ್ವಜವು
ನೋಡು ಹಾರುತಿರುವುದು
ಧ್ವಜದ ಶಕ್ತಿ ನಮ್ಮ ಭಕ್ತಿ
ನಾಡ ಸಿರಿಯ ಮೆರೆವುದು

ಕೆಂಪು ಕಿರಣ ತುಂಬಿ ಗಗನ
ಹೊನ್ನ ಬಣ್ಣವಾಗಿದೆ
ನಮ್ಮ ನಾಡ ಗುಡಿಯ ಬಣ್ಣ
ನೋಡಿರಣ್ಣ ಹೇಗಿದೆ

ರಚನೆ: ಕಯ್ಯಾರ ಕಿಯ್ಯಣ್ಣ ರೈ

## ಈ ಮಣ್ಣು ನಮ್ಮದು ಈ ಗಾಳಿ ನಮ್ಮದು

KannadaPdf.com

ಈ ಮಣ್ಣು ನಮ್ಮದು ಈ ಗಾಳಿ ನಮ್ಮದು

ಕಲಕಲನೆ ಹರಿಯುತಿಹ ನೀರು ನಮ್ಮದು

ಕಣಕಣದಲು ಭಾರತೀಯ ರಕ್ತ ನಮ್ಮದು

ನಮ್ಮ ಕಾಯ್ವ ಹಿಮಾಲಯವು ತಂದೆ ಸಮಾನ

ಗಂಗೆ ತುಂಗೆ ಕಾವೇರಿಯು ತಾಯಿ ಸಮಾನ

ಈ ದೇಶದ ಜನರೆಲ್ಲರೂ ಸೋದರ ಸಮಾನ,

ಈ ನಾಡಿನ ಹೃದಯವದು ದೈವ ಸನ್ನಿಧಾನ

ಅಜಂತ ಎಲ್ಲೋರ ಹಳೆಬೀಡು ಬೇಲೂರು

ಶಿಲೆಗಳಿವು ಕಲೆಯ ಆಗರ

ಹಿಂದು, ಬುದ್ಧ, ಜೈನ, ಕ್ರೈಸ್ತ, ಮುಸಲ್ಮಾನ

ಧರ್ಮಗಳ ಮಹಾಸಾಗರ

ನಡೆದು ಹೋದ ಚರಿತೆಯು ನಾಳೆ ಎನುವ ಕವಿತೆಯು

ಈ ನಾಡ ಮಣ್ಣಲಿದೆ ಜೀವನ ಸಾರ/ ಜೀವನ ಸಾರ

ಹ್ಞೂ..ಹ್ಞೂ...ಹ್ಞೂ...ಹ್ಞೂ...

ತಂಗಾಳಿಗೆ ತಲೆದೂಗುವ ಪೈರಿನ ಹಾಡು

ಆ ಹಾಡಿಗೆ ತಾಳ ಕೊಡುವ ಯಂತ್ರದ ಜಾಡು

ವಿಜ್ಞಾನವು ಅಜ್ಞಾನವ ಗೆಲ್ಲುವ ಹಾಡು

ಹೊಸ ಭಾರತ ನಿರ್ಮಾಣವು ಸಾಗಿದೆ ನೋಡು

ಸಾಹಿತಿ: ಆರ್. ಎನ್ ಜಯಗೋಪಾಲ್
ಹಾಡು: ಈ ಮಣ್ಣು ನಮ್ಮದು

## ದೇಶ ನನ್ನದು

ದೇಶ ದೇಶ ದೇಶ ದೇಶ ದೇಶ ನನ್ನದು

ದೇಶ ದೇಶ ದೇಶ ದೇಶ ದೇಶ ನನ್ನದು

ಸಿಂಧು ಕಣಿವೆ ಕೈಲಾಸ ಗಿರಿಯು ನನ್ನದು



KannadaPdf.com

ಹರಿಹರಿಯುವ ನೀರಕಣ ಮೇಲ್ನಗುವ ಬಾನಂಗಣ

ಹಸಿರಾಗಿಹ ಮಣ್ಣಕಣ ಹಾರಾಡುವ ಹಕ್ಕಿಗಣ

ಹೊಳೆಹೊಳೆಯುವ ಚುಕ್ಕಿಗಣ ಎಲ್ಲ ನನ್ನದು

ಎಲ್ಲ ನನ್ನದು, ಎಲ್ಲ ನನ್ನದು

ನಗೆ ಚೆಲ್ಲುವ ಮಲ್ಲಿಗೆಯ ಹೂದಳವು ನನ್ನದು

ಬಗೆಬಗೆಯ ತೆಂಗುಬಾಳೆ ಕಡಲಾಗಿಹ ಕಾಡಹೊಳೆ

ಬೆಳೆದು ನಿಂತ ವನಸಿರಿಯು, ಕಂಗೊಳಿಪ ಬೃಂದಾವನ

ಎಲ್ಲ ನನ್ನದು, ಎಲ್ಲ ನನ್ನದು

ನರಹರಿಯ ಪಾಂಚಜನ್ಯ, ವಾಲ್ಮೀಕಿಯ ರಾಮಾಯಣ

ವೇದಗಳ ಉದ್ಘೋಷ ಮಂತ್ರತಂತ್ರ ಆವಾಸ

ಕಿವಿಯ ಮೊರೆವ ಮೇಘದೂತ ಕರುಳ ಕೊರೆವ ಕುರುಕ್ಷೇತ್ರ

ಎಲ್ಲ ನನ್ನದು, ಎಲ್ಲ ನನ್ನದು

ವ್ಯಾಸ ಭಾಸ ಕಾಳಿದಾಸ ಬುದ್ಧ ಬಸವ ಕನಕದಾಸ

ರಾಮಕೃಷ್ಣ ಪರಮಹಂಸ ಮಧುಕೇಶವ ನೀಲಹಂಸ

ತಾಯಿ ಮಡಿಲ ಮುಗುಳುನಗೆ ಕೋಟಿ ತುಟಿಯ ಮಂದಹಾಸ

ಎಲ್ಲ ನನ್ನದು, ಎಲ್ಲ ನನ್ನದು

ಗಾನಮಾಲದ ದೇಶಭಕ್ತಿ ಗೀತೆಗಳ ಸಂಗ್ರಹ
ಹಾಡು: ದೇಶ ನನ್ನದು

## ಹಿಂದೂಸ್ತಾನವು ಯೆಂದು ಮರೆಯಾದ

ಹಿಂದುಸ್ಥಾನವು ಎಂದು ಮರೆಯದ
ಭಾರತ ರತ್ನವು ಜನ್ನಿಸಲಿ
ಹಿಂದುಸ್ಥಾನವು ಎಂದು ಮರೆಯದ
ಭಾರತ ರತ್ನವು ಜನ್ನಿಸಲಿ
ಈ ಕನ್ನಡ ಮಾತೆಯ ಮಡಿಲಲ್ಲಿ
ಈ ಕನ್ನಡ ನುಡಿಯ ಗುಡಿಯಲ್ಲಿ

ಹಿಂದುಸ್ಥಾನವು ಎಂದು ಮರೆಯದ,
ಭಾರತ ರತ್ನವು ಜನ್ಮಿಸಲಿ

ದೇಶ ಭಕ್ತಿಯಾ ಬಿಸಿ ಬಿಸಿ ನೆತ್ತರು
ಧಮನಿಯಲಿ ತುಂಬಿರಲಿ
ದೇಶ ಭಕ್ತಿಯ ಬಿಸಿ ಬಿಸಿ ನೆತ್ತರು
ಧಮನಿ ಧಮನಿಯಲಿ ತುಂಬಿರಲಿ
ವಿಶ್ವ ಪ್ರ ಮದಾ ಶಾಂತಿ ಮಂತ್ರದ
ಘೋಷಣೆ ಎಲ್ಲೆಡೆ ಮೊಳಗಿಸಲಿ
ಸಕಲ ಧರ್ಮದ ಸತ್ವ ಸಮನ್ವಯ ಸತ್ಯ
ಜ್ಯೋತಿಯ ಬೆಳಗಿಸಲಿ
ಹಿಂದುಸ್ಥಾನವು ಎಂದು ಮರೆಯದ ಭಾರತ ರತ್ನವು ಜನ್ಮಿಸಲಿ

ಕನ್ನಡ ತಾಯಿಯ ಕೋಮಲ ಹೃದಯದ ಭವ್ಯ ಶಾಸನ ಬರೆಯಲಿ
ಕನ್ನಡ ತಾಯಿಯ ಕೋಮಲ ಹೃದಯದ ಭವ್ಯ ಶಾಸನ ಬರೆಯಲಿ
ಕನ್ನಡ ನಾಡಿನ ಎದೆಯ ಎದೆಯಲ್ಲೂ
ಕನ್ನಡ ವಾಣಿ ಸ್ಥಾಪಿಸಲಿ ಈ ಮಣ್ಣಿನ ಪುಣ್ಯದ ದಿವ್ಯ ಚರಿತ್ರೆಯ ಕಲ್ಲು ಕಲ್ಲಿನಲ್ಲಿ ಕೆತ್ತಿಸಲಿ
ಹಿಂದುಸ್ಥಾನವು ಎಂದು ಮರೆಯದ ಭಾರತ ರತ್ನವು ಜನ್ಮಿಸಲಿ
ಈ ಕನ್ನಡ ಮಾತೆಯ ಮಡಿಲಲ್ಲಿ
ಈ ಕನ್ನಡ ನುಡಿಯ ಗುಡಿಯಲ್ಲಿ ಹಿಂದುಸ್ಥಾನವು ಎಂದು ಮರೆಯದ ಭಾರತ ರತ್ನವು ಜನ್ಮಿಸಲಿ

## ಬೆಳಗಲೀ ಬೆಳಗಲೀ ಸನಾತನಾರ್ಯಭಾರತ

ಬೆಳಗಲೀ ಬೆಳಗಲೀ ಸನಾತನಾರ್ಯಭಾರತ
ಬೆಳಗಲೀ ಬೆಳಗಲೀ ಸನಾತನಾರ್ಯಭಾರತ
ಕಳೆಯಲೀ ಕಳೆಯಲೀ ಕವಿದ ಕತ್ತಲೆಯ ಮೆರೆತ
ಬಾಳಿನಲ್ಲಿ ಬೆಳಕು ಕಂಡು ಬಾಳಿದವರ ಭಾರತ
ತೋಳಿನಲ್ಲಿ ಕ್ಷಾತ್ರತೇಜ ತುಂಬಿದವರ ಭಾರತ
ಕೇಳಿದವರ ಜ್ಞಾನತೃಷೆಗೆ ಅಮೃತವಿತ್ತ ಭಾರತ
ಮೌಳಿಯಲ್ಲಿ ಚಂದ್ರಕಲೆಯನಾಂತ ಶಿವನ ಭಾರತ
ಬ್ರಹ್ಮಲೋಕದಿಂದ ಬಂದ ಗಂಗೆ ಹರಿದ ಭಾರತ
ಬ್ರಹ್ಮಭಾವ ತುಂಬಿ ನಿಂತ ಸದ್ಗುರುಗಳ ಭಾರತ
ಧರ್ಮದಿಂದ ರಾಜ್ಯವಾಳ್ದ ರಾಮ ಮೆರೆದ ಭಾರತ
ಧರ್ಮವನ್ನು ಎತ್ತಿ ಹಿಡಿದ ಕೃಷ್ಣ ಬೆಳೆದ ಭಾರತ
ಸಕಲವಿದ್ಯೆಕಲೆಗಳನ್ನು ಬೆಳೆಸಿದವರ ಭಾರತ
ಸಕಲಲೋಕ ಕಲ್ಯಾಣದ ದಾರಿ ತೋರ್ದ ಭಾರತ
ಭಕ್ತಿಯಿಂದ ಮುಕ್ತಿ ಪಡೆದ ಜ್ಞಾನಿಜನರ ಭಾರತ
ಮುಕುತೀಶನ ಅವತಾರದ ಪುಣ್ಯಭೂಮಿ ಭಾರತ

KannadaPdf.com

ಸತ್ಯಮಾರ್ಗದಲ್ಲಿ ನಡೆದು ಬಾಳಿದವರ ಭಾರತ
ಸತ್ಯಮೇವ ಜಯತೇ ಎಂದು ಸಾರಿದವರ ಭಾರತ
ಮೃತ್ಯುವನ್ನು ಗೆದ್ದು ಅಮರರಾದವರದು ಭಾರತ
ನಿತ್ಯಸುಖವ ಪಡೆವ ಪಥವ ತೋರಿದವರ ಭಾರತ

ಗಾನಮಾಲದ ದೇಶಭಕ್ತಿ ಗೀತೆಗಳ ಸಂಗ್ರಹ
ಹಾಡು: ಬೆಳಗಲೀ ಸನಾತನಾರ್ಯ ಭಾರತ

## ಭಾರತದ ಜನ ಭಾರತೀಯ ಮನ ಎಲ್ಲಿದ್ದರೂ ಒಂದಂತೆ

ಭಾರತದ ಜನ ಭಾರತೀಯ ಮನ ಎಲ್ಲಿದ್ದರೂ ಒಂದಂತೆ
ಬರಡಾಗದ ನೆಲ ಹರಿದಾಡುವ ಜಲ ಎಲ್ಲಿದ್ದರದೆನಂತೆ
ಭಾರತದ ಜನ ಭಾರತೀಯ ಮನ ಎಲ್ಲಿದ್ದರೂ ಒಂದಂತೆ
ಬರಡಾಗದ ನೆಲ ಹರಿದಾಡುವ ಜಲ ಎಲ್ಲಿದ್ದರದೆನಂತೆ
ಆ ಆ ಆ ಆ ಆ

ಇವ ದಕ್ಷಿಣದವ ಅವ ಉತ್ತರದವ
ಇವ ಸಿಕ್ಖನು ತಾನಂತೆ
ಅವ ಕ್ರೈಸ್ತನು ಇವ ಮುಸಲನು
ಈ ಹಿಂಧುವು ಬೇರಂತೆ
ಇವ ದಕ್ಷಿಣದವ ಅವ ಉತ್ತರದವ
ಇವ ಸಿಕ್ಖನು ತಾನಂತೆ
ಅವ ಕ್ರೈಸ್ತನು ಇವ ಮುಸಲನು
ಈ ಹಿಂಧುವು ಬೇರಂತೆ

ಭಾರತದ ಜನ ಭಾರತೀಯ ಮನ ಎಲ್ಲಿದ್ದರೂ ಒಂದಂತೆ
ಬರಡಾಗದ ನೆಲ ಹರಿದಾಡುವ ಜಲ ಎಲ್ಲಿದ್ದರದೆನಂತೆ

ಆಡುವುದದೊಂದಾಗಿರೆ ಮಾಡುವುದೇ ಬೇರೊಂದು
ನಡೆ ನುಡಿಯಲ್ಲಿಹ ಬೇಧವು ನೂರು ಮತ್ತೊಂದು
ಆಡುವುದದೊಂದಾಗಿರೆ ಮಾಡುವುದೇ ಬೇರೊಂದು
ನಡೆ ನುಡಿಯಲ್ಲಿಹ ಬೇಧವು ನೂರು ಮತ್ತೊಂದು

ಭಾರತದ ಜನ ಭಾರತೀಯ ಮನ ಎಲ್ಲಿದ್ದರೂ ಒಂದಂತೆ
ಬರಡಾಗದ ನೆಲ ಹರಿದಾಡುವ ಜಲ ಎಲ್ಲಿದ್ದರದೆನಂತೆ

ನಡೆದಾಡುವ ನೆಲ ಹರಿದಾಡುವ ಜಲ ಎಲ್ಲವೂ ಅದರಂತೆ

| Download: KannadaPDF.com | https://KannadaPdf.com/ |
| --- | --- |

ನಾವಾಡುವ ನುಡಿ ಬೇರೆನ್ನುವನ ಭಾರತಿಗಿದೆ ಚಿಂತೆ
ನಡೆದಾಡುವ ನೆಲ ಹರಿದಾಡುವ ಜಲ ಎಲ್ಲವೂ ಅದರಂತೆ
ನಾವಾಡುವ ನುಡಿ ಬೇರೆನ್ನುವನ ಭಾರತಿಗಿದೆ ಚಿಂತೆ

ಭಾರತದ ಜನ ಭಾರತೀಯ ಮನ ಎಲ್ಲಿದ್ದರೂ ಒಂದಂತೆ
ಬರಡಾಗದ ನೆಲ ಹರಿದಾಡುವ ಜಲ ಎಲ್ಲಿದ್ದರದೆನಂತೆ
ಭಾರತದ ಜನ ಭಾರತೀಯ ಮನ ಎಲ್ಲಿದ್ದರೂ ಒಂದಂತೆ
ಬರಡಾಗದ ನೆಲ ಹರಿದಾಡುವ ಜಲ ಎಲ್ಲಿದ್ದರದೆನಂತೆ
ಆ ಆ ಆ ಆ ಆ

## ವೇಷ ಬೇರೆ ಭಾಷೆ ಬೇರೆ ದೇಶ ಒಂದೇ ಭಾರತ

ವೇಷ ಬೇರೆ ಭಾಷೆ ಬೇರೆ ದೇಶ ಒಂದೇ ಭಾರತ
ಒಂದೇ ತಾಯ ಮಕ್ಕಳೆಂದು ಘೋಶಿಸೋಣ ಸಂತತ
ತೀರ್ಥ ನಗೆಯ ಕ್ಷೇತ್ರವಿದೋ ಭವ್ಯ ನಾಡು ಭಾರತ
ಋಷಿಗಳುಸಿರ ಹರಕೆ ಹೊತ್ತ ದಿವ್ಯ ನಾಡು ಭಾರತ
ಕಡಲುಗಳನೆ ಉಡುಗೆಯುಟ್ಟು ಘಟ್ಟದೊಳು ಬಳೆಯ ತೊಟ್ಟು
ನದಿ ನದಗಳ ಹಾರವಿಟ್ಟು ಸೇತುವಿಂದ ಸಿಂಧುವರೆಗೂ ಬೆಳೆದು ನಿಂತ ಭಾರತ
ಭಂಗಗೊಳದ ವಂಗ ನಾಡ ಕೂಡಿ ಮೆರೆದ ಭಾರತ
ಇದೇ ನಮ್ಮ ಭಾರತ ಪುಣ್ಯ ಭೂಮಿ ಭಾರತ
ಭರತ ಖಂಡದಿಂದಲೇನೆ ನಿನಗೆ ಮೋಕ್ಷ ಪ್ರಾಪ್ತಿ
ತಪ್ಪಿ ನುಡಿದೆ ಎಂದರಹುದು ನಿನಗೆ ತಕ್ಕ ಶಾಸ್ತಿ
ಯಾವ ದೇಶದಲ್ಲೇ ದುಡಿ ಯಾವ ಮಣ್ಣಿನಲ್ಲೇ ಮಡಿ
ನಿಂತ ನೆಲವು ಹಿಡಿದ ಹುಡಿ ಭರತ ಭೂಮಿ ಎಂದು ತಿಳಿ
ಮಣ್ಣ ಮೋಹ ಬಿಟ್ಟರಿಲ್ಲೋ ನಿನಗೆ ಬೇರೆ ಸದ್ಗತಿ
ಬರಿಯ ಮಾತಿನಲ್ಲೇ ಮುಗಿವುದಲ್ಲೋ ನಿನ್ನ ಸಂಸ್ಕೃತಿ
ಮಾನವತೆಯ ಶುಚಿ ಮತಿ ಸನಾತನದ ಸತ್ಕೃತಿ

ಸಾಹಿತಿ: ಸಾಶಿ ಮರುಳಯ್ಯ
ಹಾಡು: ದೇಶ ಒಂದೇ ಭಾರತ

## ಹಿಂದುಸ್ಥಾನವು ಎಂದೂ ಮರೆಯದ ಭಾರತ ರತ್ನವು ನೀನಾಗು

ಹಿಂದುಸ್ಥಾನವು ಎಂದೂ ಮರೆಯದ ಭಾರತ ರತ್ನವು ನೀನಾಗು ||
ಕನ್ನಡ ಹಿರಿಮೆಯ ಮಗನಾಗು, ಕನ್ನಡ ನುಡಿಯಾ ಸಿರಿಯಾಗು
ಹಿಂದುಸ್ಥಾನವು ಎಂದೂ ಮರೆಯದ ಭಾರತ ರತ್ನವು ನೀನಾಗು

| Download: KannadaPDF.com | https://KannadaPdf.com/ |
|---|---|

ಭಾರತ ದೇಶದ ಬಡವರ ಕಂಬನಿ ಒರೆಸುವ ನಾಯಕ ನೀನಾಗು ||
ಭಾರತೀಯರ ವಿಶ್ವ ಪ್ರೇಮವ ಮೆರೆಸುವ ಜ್ಞಾನಿ ನೀನಾಗು
ಭಾರತೀಯರ ಭವ್ಯ ಭವಿಷ್ಯವ ಬೆಳಗುವ ವಿಜ್ಞಾನಿ ನೀನಾಗು, ಬೆಳಗುವ ವಿಜ್ಞಾನಿ ನೀನಾಗು
ಹಿಂದುಸ್ಥಾನವು ಎಂದೂ ಮರೆಯದ ಭಾರತ ರತ್ನವು ನೀನಾಗು |

ಭೂಮಂಡಲದ ಹಾಹಾಕಾರವ ನೀಗುವ ಶಕ್ತಿಯು ನೀನಾಗು ||
ಮಾರಕಶಕ್ತಿಯ ದೂರಗೈಯುವ ವೀರಶಿರೋಮಣಿ ನೀನಾಗು
ಬ್ರಮ್ಹಾಂಡವನೇ ಬೆಳಗುವ ಶಕ್ತಿಯ ಕಾಣುವ ಯೋಗಿಯು ನೀನಾಗು, ಕಾಣುವ ಯೋಗಿಯು ನೀನಾಗು
ಹಿಂದುಸ್ಥಾನವು ಎಂದೂ ಮರೆಯದ ಭಾರತ ರತ್ನವು ನೀನಾಗು ||

## ದೇಶ ಸೇವೆ..ದೇಶ ಸೇವೆ

ದೇಶ ಸೇವೆ..ದೇಶ ಸೇವೆ ಗೈವುದೆ ನಮ್ಮ ಧ್ಯೇಯ
ನಾವು ಮಕ್ಕಳು  ಭಾರತ ಮಾತೇಯ ||2||

ನಮ್ಮ ಭಾರತ ಚೆಲುವಿನ ನಾಡು
ಇಲ್ಲಿ ಜನಿಸಿರುವುದೆ ಪುಣ್ಯ ನೋಡು
ನಮ್ಮ ದೇಶ ಸಂಸ್ಕೃತಿಯ ನೆಲೆವೀಡು
ಸ್ವರ್ಗವಿಲ್ಲಿದೆ,ಸ್ವರ್ಗವಿಲ್ಲಿದೆ,ಸ್ವರ್ಗವಿಲ್ಲಿದೆ ಬೇರೆಲ್ಲೂ ಇಲ್ಲ
ನಾವು ಮಕ್ಕಳು ಭಾರತ ಮಾತೇಯ    [ದೇಶ ಸೇವೆ]

ದೈವಕೃಪೆಯಿರೆ ನಮ್ಮಯ ಮೇಲೆ
ಎಂತಹ  ಕಾರ್ಯವು  ನಮಗೊಂದು ಲೀಲೆ
ನಮಗೆಲ್ಲಾ ಕಾದಿದೆ ಭವ್ಯ ನಾಳೆ
ಎಂಬ ವಿಶ್ವಾಸ ,ಎಂಬ ವಿಶ್ವಾಸ,ಎಂಬ ವಿಶ್ವಾಸ ಕುಂದುವುದಿಲ್ಲ
ನಾವು ಮಕ್ಕಳು ಭಾರತ ಮಾತೇಯ  [ದೇಶ ಸೇವೆ]

KannadaPdf.com